Regd. No. M. 1299 || ಸತ್ಯಾನ್ನಾಸ್ತಿ ಪರೋ ಧರ್ಮಃ || ಬಿಡಿ ಪ್ರತಿ ೩ ಪೈ.

ಸತ್ಯವಾದಿ

ಆಫೀಸ್—ಚಾಮರಾಜ ಅಗ್ರಹಾರ, ಮೈಸೂರು ಪ್ರತಿ ಮಂಗಳವಾರವೂ ಪ್ರಕಟಿಸಲ್ಪಡುವುದು ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ 1—8—0

ಸಂಪುಟ ೭] ಮೈಸೂರು, ಮಂಗಳವಾರ, ೩೦ ನೆ ಜೂಲೈ ೧೯೨೫. [ಸಂಚಿಕೆ ೨೭

ಕಲಾಮಂದಿರಂ, ಬೆಂಗಳೂರು ಸಿಟಿ

ಕ ಲಾ ಭ್ಯಾ ಸ

ಒಂದು ವರ್ಷದಲ್ಲಿ ಸ್ವತಂತ್ರವಾಗಿ ಜೀವನವಾಡಲು ಸಮರ್ಥರಾಗುವಿರಿ.

ವಿದ್ಯಾರ್ಥಿ ವೇತನ ೩ ರಿಂದ ೭ ರೂಪಾಯಿನವರಿಗೆ

೧ ಇದೇ ಜುಲೈ ೧ ನೆ ತಾರೀಖಿನಿಂದ ಒಂದು ವರ್ಷ ಕಾಲ

೨ ವಿದ್ಯಾರ್ಥಿಗಳು ೧೩ ವರ್ಷಕ್ಕೆ ಮೇಲ್ಪಟ್ಟು ೨೫ ರ ವಳಗೆ ಇರತಕ್ಕದ್ದು ಮತ್ತು ಕನ್ನಡ ೩ ನೇ ತರಗತಿಯವರಿಗಾದರೂ ವ್ಯಾಸಂಗಮಾಡಿರತಕ್ಕದ್ದು.

೩ ಪ್ರತಿಯೊಂದು ಡಿಸ್ಟ್ರಿಕ್ಟಿನಿಂದಲೂ ಮೈಸೂರು, ಬೆಂಗಳೂರು ಪಟ್ಟಣಗಳಿಂದಲೂ ಇಬ್ಬಿಬ್ಬರನ್ನು ಆರಿಸಿಕೊಳ್ಳುವೆವು

೪ ಪ್ರತಿ ವಿದ್ಯಾರ್ಥಿಯೂ ಪ್ರಾರಂಭದಲ್ಲಿ ೫೦ ರೂಪಾಯಿಗಳನ್ನು ಕೊಡತಕ್ಕದ್ದು

—ಬೋಧಿಸುವ ಅಂಶಗಳು—

೧ ಡ್ರಾಯಿಂಗ್, ಪೆಯಿಂಟಿಂಗ್, ಸ್ಕೆಚ್ಚಿಂಗ್.

೨ ಬೋರ್ಡು ಬರೆಯುವದು, ಸ್ಕ್ರೀನುಗಳನ್ನು ಬರೆಯವುದು.

೩ ಮನೆಗಳಿಗೆ ಬಣ್ಣವನ್ನು ಹಾಕುವದು. ಮತ್ತು ಅಲಂಕಾರಮಾಡುವುದು.

೪, ಫೋಟೋ ತೆಗೆಯುವದು. ಎನ್‌ಲಾರ್ಜ್ ಮಾಡುವುದು

೫ ಹತ್ತಿಯನ್ನು ಸಿದ್ಧಮಾಡಿಕೊಂಡು ನೂಲುವದು,

ಮುಂತಾದ ಇನ್ನೂ ಅನೇಕ ಕೈಕಸಬನ್ನೂ ಕಲಿಸಿಕೊಡುವೆವು.

ಎ. ಎಕ್. ಸುಬ್ಬರಾವ್
ಆರ್ಟಿಸ್ಟ್

ಸುಗಂಧ ದ್ರವ್ಯಗಳು

ನಮ್ಮಲ್ಲಿ ಎಲ್ಲಾ ತರಹದ ಊದುಬತ್ತಿಗಳೂ, ಧದಬಿಲ್ಲೆಗಳೂ, ಪನ್ನೀರು, ರಾಯಲ್ ಸುಗಂಧಿ ತರಹ ಮುಡಿಬ್ಬಾಗಳು, ಎಲ್ಲಾ ತರಹದ ಷರಗಳು, ಇವುಗಳೆಲ್ಲಾ ದೊರೆಯುತ್ತವೆ. ಖರೀದಿಯೂ ಆಗಿಯೂ, ಪದಾರ್ಥಗಳು ಸಂಬಿಕೆಯಾಗಿ ಸುತ್ತವೆ. ಅಪೇಕ್ಷಿಸುವವರು ತರಿಸಿಕೊಳ್ಳಬಹುದು. [22-5]

ಉಪಾಧ್ಯಾಯ ಎಂಡ್ ಸನ್ಸ್
ಸಹಕಾರಿಗಳು, ಮೈಸೂರು

ಸೀಮೆ ಭಂಗಾತದ ರೇಡಿಯಂ ರಿಸ್ಟ್‌ವಾಚ್



ಚಿತ್ರದಲ್ಲಿ ಕಾಣುವಂತೆಯೇ ಇರುವ ಈ ಗಡಿಯಾರಗಳು ಹೊಸದಾಗಿ ಬಂದಿವೆ. ಈ ಗಡಿಯಾರದ ಕಾಂಪೊಸಿಷನ್‌ಗಳು ಬಹು ಒಳ್ಳೆಯವು. ಮತ್ತು ಬಲಿಷ್ಟವಾದವು. ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವುದು. ಒಂದು ವೇಳೆ ಹಿಂದು ಮುಂದು ಹೋದರೂ ನಾವೇ ಸರಿಮಾಡಿಕೊಳ್ಳಬಹುದು. ಈ ಗಡಿಯಾರಗಳು ಸ್ವಿಡ್ಜರ್‌ಲ್ಯಾಂಡು ದೇಶದಲ್ಲಿ ತಯಾರಾದುವು. ಇತರ ಗಡಿಯಾರಗಳಲ್ಲಿ ರಾತ್ರಿ ವೇಳೆಯಲ್ಲಿ ಗಂಟೆ ನೋಡಬೇಕಾದರೆ ಬೆಳಕು ಬೇಕು. ಈ ಗಡಿಯಾರಗಳಲ್ಲಿ ರಾತ್ರಿ ವೇಳೆಯಲ್ಲಿ ಗಂಟೆ ನೋಡಬೇಕಾದರೆ ಬೆಳಕು ಅವಶ್ಯಕವಿಲ್ಲ. ಎಷ್ಟು ಕತ್ತಲೆಯಾಗಿರುತ್ತೋ ಅಷ್ಟು ಚೆನ್ನಾಗಿ ಸೂರ್ಯನಂತೆ ಪ್ರಕಾಶವಾಗಿ ಗಂಟೆ ತೋರಿಸುವುದು. ಹಗಲು ವೇಳೆಯಲ್ಲಿ ಸಾಧಾರಣ ಗಡಿಯಾರಗಳಂತೆ ಇರುವುದು.

ಕ್ರಯ ಗಡಿಯಾರ 1 ಕ್ಕೆ ರೂ. 7—8—0
ಬೆಳ್ಳಿ ಗಡಿಯಾರ 1 ಕ್ಕೆ ರೂ. 9—0—0

ವಿಳಾಸ:—ಗೌರಿ ಅಂಡ್ ಕೋ.,
ನಂ. 39 ಪರಮಾನಂದ ಮೊದಲಿ ಬೀದಿ.
ಮಿಂಟ್ ಪೋಸ್ಟು, ಮದರಾಸ್.

ಹೊಸಮಾದರಿಯ ಊದಬತ್ತಿಗಳು

ಉತ್ತಮವಾದ ಮೂಲಿಕೆಗಳಿಂದಲೂ ಅತ್ತರು ಮೊದಲಾದ ಸಾರಗಳಿಂದಲೂ ಒಡಗೂಡಿ ದೇವತಾ ಪೂಜ್ಯಕ್ಕೆ ಯೋಗ್ಯವಾದ 'ದಶಾಂಗಬತ್ತಿ' ಎಂಬ ದಾಗಿ ಪ್ರಸಿದ್ಧಿಹೊಂದಿರುವ ಹೊಸರೀತಿಯ ಊದು ಬತ್ತಿಗಳು ನಮ್ಮಲ್ಲಿ ತಯಾರಾಗಿ ಬಿಕರಿಗೆ ಸಿದ್ಧವಾಗಿವೆ ಕ್ರಯ ಸೇರು ೧ ಕ್ಕೆ (ಸುಮಾರು ೬೦೦ ಬತ್ತಿಗಳು) ೩ ರೂಪಾಯಿ ಮಾತ್ರ. ಸರ್ವರೂ ತರಿಸಿ ತನ್ಮೂಲಕ ನಮ್ಮ ಶ್ರಮವನ್ನು ಸಾರ್ಥಕಗೊಳಿಸಬೇಕಾಗಿ ಪ್ರಾರ್ಥನೆ. ನಮ್ಮಲ್ಲಿ ಇನ್ನೂ ಇತರ ವಿಧವಾದ ಹೆಬ್ಬಿನ ಬೆಲೆಯ ಅಂಬರ್ ಕಸ್ತೂರಿಬತ್ತಿಗಳೂ, ಗಂಧದಬಿಲ್ಲೆ ಅರಗಜ, ಪನ್ನೀರು ವಗೈರೆ ಸಹಾ ದೊರೆಯುತ್ತೆ.

ಇದಲ್ಲದೆ ನಂಜನಗೂಡಿನ ಎಂ|| ಬಿ.ಎ, ಪಂಡಿತರ ಲೋಕಪ್ರಸಿದ್ಧವಾದ ಸಿದ್ಧೌಷಧಗಳೂ, ಷರಬತ್ತುಗಳೂ, ತೈಲಗಳೂ, ಲೇಹ್ಯಗಳೂ ನಮ್ಮಲ್ಲಿ ಸಿಕ್ಕುತ್ತೆ,

ಸಿ. ಪದ್ಮಯ್ಯ, ಕಮರ್ಷಿಯಲ್ ಹಾಲ್,
ಸಂತೇಪೇಟಿ, ಮೈಸೂರು,

ಸತ್ಯವಾದಿ ಪ್ರೆಸ್ ಮೈಸೂರು

—೦—

ನಾವು ಎಲ್ಲಾ ವಿಧವಾದ ಮುದ್ರಣ ಕೆಲಸವನ್ನೂ ಸುಲಭ ದರದಿಂದಲೂ, ಸೊಗಸಾಗಿಯೂ, ಸಕಾಲದಲ್ಲಿಯೂ ಮಾಡಿಕೊಡುತ್ತೇವೆ.

MYSORE GOVERNMENT LOAN BONDS & Shares of Prominent Companies BOUGHT & SOLD

For particulars apply to:—

THE SEMAH ELISHA COMPANY
MYSORE.

ಮೈಸೂರು ಸರ್ಕಾರಿ ಸಾಲದ ಪತ್ರ ಮತ್ತು ಕಂಪೆನಿ ಷೇರುಗಳನ್ನು ಕೊಂಡುಕೊಳ್ಳುತ್ತೇವೆ ಮತ್ತು ಬಿಕರಿ ಮಾಡುತ್ತೇವೆ.

ಸೇಮಾ ಇಲೈಷಾ ಕಂಪೆನಿ ಮೈಸೂರು.

ಭಾರತ ಸರ್ವಸ್ವ

ಭರತಖಂಡದ ಪ್ರಖ್ಯಾತ ಕವಯಿತ್ರಿಯರೂ ಉಜ್ವಲ ದೇಶಭಕ್ತೆಯರೂ ಆದ ಶ್ರೀಮತಿ ಸರೋಜಿನಿ ದೇವಿಯರ ಸುಪ್ರಸಿದ್ಧ ಪುಸ್ತಕವಾದ 'ಸೋಲ್ ಆಫ್ ಇಂಡಿಯ' ಎಂಬುದರ ಕನ್ನಡ ಪರಿವರ್ತನ ಕ್ರಯ 1 ಆಣೆ ಒಂದೂವರಾಣೆಯ ಸ್ಟ್ಯಾಂಪನ್ನು ಕಳುಹಿಸಿದರೆ ಒಂದು ಪುಸ್ತಕ ಕಳುಹಿಸಲ್ಪಡುತ್ತದೆ.

ವಿಳಾಸ—ಸತ್ಯವಾದಿ ಆಫೀಸ್ ಮೈಸೂರು.

ಕಲಾಮಂದಿರಂ, ಬೆಂಗಳೂರು ಸಿಟಿ

ನಮ್ಮಲ್ಲಿ ಎಲ್ಲಾ ವಿಧವಾದ ಪೆಯಿಂಟಿಂಗ್ ಎನ್‌ಲಾರ್ಜ್‌ಮೆಂಟು ಕೆಲಸಗಳೂ, ಚಿತ್ರಪಠಗಳನ್ನು ಬರೆಯುವುದು ಮುಂತಾದ ಕುಶಲವಿದ್ಯೆಗಳು ಉತ್ತಮ ರೀತಿಯಿಂದ ನಡೆಯುತ್ತವೆ. ಮತ್ತು ವಿದ್ಯಾರ್ಥಿಗಳನ್ನು ಕುಶಲವಿದ್ಯೆಗಳಲ್ಲಿ ತಯಾರ್ಮಾಡುವೆವು. ಈ ಒಂದು ತಿಂಗಳವರಿಗೆ 15-12 ಸೈಜು ಎನ್‌ಲಾರ್ಜುಮೆಂಟ್ ಮಾಡುವುದಕ್ಕೆ ಕಮ್ಮಿ ಚಾರ್ಜು ಅಂದರೆ 12 ರುಪಾಯಿಗೆ ಮಾಡಿಕೊಡುವೆವು. ಫೋಟೋ ಮತ್ತು ಆರ್ಡರ್ ಹಣಾ ರವಾನಿಸಿ.

"ಸತ್ಯವಾದಿ"

೩೦ ನೆ ಜೂಲೈ ೧೯೨೫

ಮನೆಕಂದಾಯ ಹೆಚ್ಚಿಸಲೇ ಬೇಕೆ!

ಮೇಲ್ಕಂಡ ಮೇರೆಗೆ ರಾಜಧಾನಿಯ ಹಲವು ಕಡೆಗಳಲ್ಲಿ ಪ್ರಜೆಗಳು ದೀನಸ್ವರದಿಂದ ಗೊಣಗುಟ್ಟುತ್ತಿರುವದು ಸಾಧಾರಣವಾಗಿ ಎಲ್ಲರ ಕಿವಿಗೂ ಬಿದ್ದೇ ಇರಬಹುದು.

ಕಾರಣವೇನೆಂದರೆ—ರಾಜಧಾನಿಯ ಮುನಿಸಿಪಾಲಿಟಿಗೆ ಖರ್ಚಿಗೆ ಬೇಕಾದಷ್ಟು ಹಣ ಶೇಖರಿಸುವಸಲುವಾಗಿ, ರಾಜಧಾನಿಯಲಿನ ಮನೆಗಳ ತೆರಿಗೆಯನ್ನು ಹೆಚ್ಚಿಸಲು ನಿರ್ಧರಿಸಿ, ಈ ವಿಷಯದಲ್ಲಿ ಆಯಾ ಮನೆ ವಾಸಸ್ಥರಿಗೆ ನೋಟೀಸು ಕೊಟ್ಟಿರುತ್ತಾರೆ. ಈ ನವೀನ ಏರ್ಪಾಡು ಕಂದಾಯ ವಿಧಿಸುವ ನೀತಿಯನ್ನು, ಅಷ್ಟುಮಟ್ಟಿಗೆ ಅನುಸರಿಸದಿದ್ದರೂ, ಕೇವಲ ಬಡಬಗ್ಗರ ದ್ರವ್ಯಾಭಾವದ ತೊಂದರೆಯನ್ನು ಹೆಚ್ಚಿಸಲು ಸಹಕಾರಿಯಾಗಿದೆ ಎಂದು ಧಾರಾಳವಾಗಿ ಹೇಳಬಹುದು.

ಮುನಿಸಿಪಲ್ ನೋಟೀಸಿನಿಂದ ತಿಳಿಯಬರುವಂತೆ ಕಂದಾಯ ಹೆಚ್ಚಿಸುವದಕ್ಕೆ ಕಾರಣವೇನೆಂದರೆ—ಹೋದ ವರ್ಷಕ್ಕಿಂತ ಈಗ ಮನೆಗಳ ಬಾಡಿಗೆಯದರ ಹೆಚ್ಚಿರುವದೆಂದು. ಇದು ಕೇವಲ ಊಹಾಶಕ್ತಿಯಿಂದ ನಿರ್ಧರಿಸಲ್ಪಟ್ಟಿರುವುದೇ ಹೊರ್ತು ಅನ್ಯಥಾ ಅಲ್ಲ. ಏಕೆಂದರೆ, ಅನೇಕರು ತಮ್ಮ ಮನೆಗಳನ್ನು ಗತವರ್ಷಕ್ಕಿಂತ ಯಾವ ರೀತಿಯಲ್ಲಿಯೂ ವೆತ್ಯಾಸಮಾಡಿಲ್ಲದಿರುವದೂ, ಮನೆ ಸ್ಥಿತಿಗತಿಗಳನ್ನು ಸಂಪೂರ್ಣವಾಗಿ ವಿಚಾರಣೆ ಮಾಡದಿರುವದೂ; ಅನೇಕರಿಗೆ ಕಳೆದ ೨ ವರ್ಷದಿಂದ ಅತಿವೃಷ್ಟಿ ಅನಾವೃಷ್ಟಿ ದೆಸೆಯಿಂದ ಉಂಟಾಗಿರತಕ್ಕ ನಷ್ಟವೂ, ಮತ್ತು ಜನರಿಗೆ ಕೆಲಸ ಸಿಕ್ಕದ ತೊಂದರೆಯೂ ಈಗಿರ್ವ ಕಂದಾಯವೇ ಸರಿಯಾಗಿ ಕಲೆಕ್ಟಾಗದಿರುವುದೂ, ಇವೆಲ್ಲಾ ಬಡ ಪ್ರಜೆಗಳ ಪರವಾದ ಮತ್ತು ಮುನಿಸಿಪಾಲಿಟಿಯ ಅವಗಾಹನೆಗೆ ಬರಬೇಕಾದ ವಿಷಯಗಳಾಗಿವೆ.

ಇಂಡಿಯಾದೇಶದ ಹಲವು ಪ್ರಮುಖ ಮುನಿಸಿಪಾಲಿಟಿಗಳಂತೆ ನಮ್ಮ ನಮ್ಮ ಮುನಿಸಿಪಾಲಿಟಿಯೂ ಸರಿಯೂಗಿ ತನ್ನ ಖರ್ಚನ್ನು ಖೋತಾವಾಡಿಕೊಂಡು ಪುರನಿವಾಸಿಗಳಮೇಲೆ ಅವರು ತೆರಲಾರದಷ್ಟು ದುಬಾರಿ ಕಂದಾಯವನ್ನು ಹಾಕದೆ, ಆಡಳಿತವನ್ನು ನಡೆಸಬಾರದೇ ಎಂದು ಆಶಿಸುತ್ತಾರೆ.

ಇಂತಹ ಸಮಯದಲ್ಲಿ ನಾಮಾಂಕಿತವಾಗಿ ಜನ್ಮದಿಂದಿರುವ ರೇಟ್‌ಪೇಯರ್ಸ್ ಅಸೋಸಿಯೇಷನ್ನಾಗಲೀ, ವೋಟನ್ನು ಪಡೆಯುವ ಕಾಲದಲ್ಲಿ ಪ್ರಜೆಗಳನ್ನು ಆಶ್ರಯಿಸಿದ ಮುನಿಸಿಪಲ್ ಕೌನ್ಸಿಲರುಗಳಾಗಲೀ, ಏತಕ್ಕೆ ಪುರನಿವಾಸಿಗಳ ಕ್ಷೇಮಾಭ್ಯುದಯಕ್ಕೆ ಮುಂದುವರಿದು ಬರಬಾರದು? ಅಥವ ಪ್ರಜಾಪಕ್ಷಪಾತಿಗಳೂ ಪುರಪ್ರಮುಖರೂ ತಮ್ಮ ಸಹಾಯವನ್ನು ನಿಂಡಬಾರದೆ!

ಮುಖ್ಯವಾಗಿ ಮುನಿಸಿಪಾಲಿಟಿಯು ಸ್ಥಳೀಯ ಸ್ವರಾಜ್ಯ. ಪ್ರಜಾಕ್ಷೇಮವೇ ಸ್ವರಾಜ್ಯದ ಮುಖ್ಯೋದ್ದೇಶ. ಹೀಗಿರುವಲ್ಲಿ ನಮ್ಮ ಮುನಿಸಿಪಾಲಿಟಿಯ ಪ್ರೆಸಿಡೆಂಟರೂ, ಕೌನ್ಸಿಲರುಗಳೂ ತೆರಿಗೆಹೆಚ್ಚಿಸುವದಕ್ಕೆ ಮುಂಚೆ ಪ್ರಜೆಗಳ ಅಭಿಮತವನ್ನು ಪಡೆದು, ಮಿಕ್ಕ ಕೆಲಸವನ್ನು ನಂತರ ಮಾಡಿದಲ್ಲಿ, ಮಾದರಿ ಸಂಸ್ಥಾನದ ಮಾದರಿ ಮುನಿಸಿಪಾಲಿಟಿಯಾಗಿ ಪರಿಣಮಿಸುವುದಲ್ಲದೆ, ಪುರಜನರ ಅಭ್ಯುದಯವೇ ಈ ಮುನಿಸಿಪಾಲಿಟಿಯ ಆಶಯವೆಂದು ಪ್ರಸಿದ್ಧಿಹೊಂದಿ, ಇತರ ಮುನಿಸಿಪಾಲಿಟಿಗಳಿಗೆ ಮೇಲ್ಪಂಕ್ತಿಯಾಗುವುದು.

ವೃತ್ತಾಂತ ಸಂಗ್ರಹ

ಪ್ರಪಂಚದಲ್ಲಿ ಹೆಚ್ಚಾದ ಸಂಪಾದನೆಯುಳ್ಳ ಧೊರೆ ಯಾರು?

—ಜರ್ಮನಿಯಲ್ಲಿ ಹೊರಡಿಸಿದ ರಿಪಬ್ಲಿಕ್ ಪ್ಯಾಂಫ್ಲೆಟ್ ಪ್ರಕಾರ ಸಯಾಂ ದೇಶದ ರಾಜನಿಗೆ ಪ್ರಪಂಚದ ಎಲ್ಲಾ ರಾಜರಿಗಿಂತಲೂ ಹೆಚ್ಚಾದ ಸಂಪಾದನೆ ಇರುವುದೆಂದೂ ನಂತರ ಇಟಲಿ ದೇಶದ ವಿಕ್ಟರ್ ಇಮಾನ್ಯೂಲ್ ಎಂಬುವನೂ ನಂತರ ಬ್ರಿಟಿಷ್ ಸಾರ್ವಭೌಮರಾದ ಜಾರ್ಜ್‌ರವರು ಮೂರನೆ ದರ್ಜೆಗೆ ಸೇರುವರೆಂದೂ ತಿಳಿದುಬರುತ್ತೆ. ರಾಜರ ವ್ಯಾಪಾರವನ್ನು ಅಮೆರಿಕಾದಲ್ಲಿ ಕಬ್ಬಿಣ ತಯಾರ್ಮಾಡುವ ವ್ಯಾಪಾರಕ್ಕೆ ಹೋಲಿಸಬಹುದು.

ರಾಜರುಗಳ ವರಮಾನವು ಈ ರೀತಿ ಇರುವುದು

ಸಯಾಂ	೩,೫೦೦,೦೦೦ ಪೌಂ
ಇಟಲಿ	೩,೨೦೦,೦೦೦
ಇಂಗ್ಲೆಂಡ್	೨,೯೦೦,೦೦೦
ಜಪಾನ್	೨,೨೫೦,೦೦೦
ಸ್ಪೇನ್	೧,೭೭೫,೦೦೦
ಬೆಲ್ಜಿಯಂ	೧,೦೭೫,೦೦೦
ಸರ್ಬಿಯಾ	೬೫೫,೦೦೦
ರೊಮೇನಿಯ	೫೦೦,೦೦೦
ಸ್ವೀಡನ್	೪೬೩,೬೦೦
ಬಲ್ಗೇರಿಯಾ	೪೦೦,೦೦೦
ಡೆನ್‌ಮಾರ್ಕ್	೩೦೦,೦೦೦
ನಾರ್ವೆ	೨೪೪,೦೦೦

—ಮಂಜಿನ ಕೆನೆಯು (ಐಸ್ ಕ್ರೀಂ) ಮೊಟ್ಟ ಮೊದಲು ಇಟಲಿಯಲ್ಲಿ ತಯಾರಿಸಲ್ಪಟ್ಟಿತು. ೧೫೫೫ ರಲ್ಲಿ ಫ್ರಾನ್ಸ್ ದೇಶದಲ್ಲಿ ಉಪಯೋಗಿಸುವುದಕ್ಕೆ ಪ್ರಾರಂಭ. ೧೭೮೦ರಲ್ಲಿ ಇಂಗ್ಲೆಂಡಿನಲ್ಲಿ ಪ್ರಚುರಪಡಿಸಿದ ಒಂದು ಪತ್ರಿಕೆಯಲ್ಲಿ ಇದರ ವಿಷಯವಾಗಿ ಬರೆದಿದೆ. ೧೭೦೦ರಲ್ಲಿ ಅಮೆರಿಕಾ ದೇಶದಲ್ಲಿ ಉಪಯೋಗಿಸುವುದಕ್ಕೆ ಪ್ರಾರಂಭ.

—ಈಗ ಕಲ್ಕತ್ತಾದಲ್ಲಿ ಮೂರು ಆಯುರ್ವೇದದ ಕಾಲೇಜುಗಳಿವೆ. ಈಚೆಗೆ ಕಲ್ಕತ್ತ ಕಾರ್ಪೊರೇಷನ್ನಿನವರು ಈ ಮೂರು ಕಾಲೇಜುಗಳಿಗೂ ಪ್ರತ್ಯೇಕವಾಗಿ ಸಹಾಯಮಾಡುವುದು ಸಾಧ್ಯವಿಲ್ಲವೆಂದು ಮೂರನ್ನೂ ಒಟ್ಟುಗೂಡಿಸಿ ಒಂದೇ ಕಾಲೇಜನ್ನಾಗಿ ಮಾಡಬೇಕೆಂದು ಅಭಿಪ್ರಾಯಪಟ್ಟಿರುವರು. ಇದಕ್ಕೆ ಎರಡು ಕಾಲೇಜಿನವರು ಸಮ್ಮತಿಸಿದರು. ಮೂರನೆಯದು ಇದನ್ನು ಅನುಮೋದಿಸದಿರಲು ಈ ವಿಷಯವನ್ನು ಜರ್ಚಿಸುವುದಕ್ಕೆ ಒಂದು ಬೋರ್ಡನ್ನು ಸ್ಥಾಪಿಸುವರು. ಹಿಂದೂಗಳು ಒಬ್ಬೊಬ್ಬರಾಗಿದ್ದರೆ ಚೆನ್ನಾಗಿ ಗಲಸಮಾಡುವರೆಂದೂ ಒಟ್ಟಿಗೆ ಸೇರುವುದಕ್ಕೆ ಪ್ರಯತ್ನಪಟ್ಟರೆ ಕಾದಾಡುವರೆಂದೂ ಹೇಳಿದ ಒಬ್ಬ ಮೊಗಲ್ ಚಕ್ರವರ್ತಿಯ ವಾಕ್ಯ ಈಗ ನಿದರ್ಶನಕ್ಕೆ ಬಂದಿರುವುದು.

—ಕಾಶಿಯ ಹಿಂದೂ ವಿಶ್ವವಿದ್ಯಾಲಯಕ್ಕೆ ಮತ್ತಷ್ಟು ಹಣ ಶೇಖರಿಸಲು ಪಂಡಿತ ಮದನಮೋಹನ ಮಾಲವೀಯರವರು ಉಪಕ್ರಮಿಸಿದರು, ಬಾಬು ಘನ್ಸ್ಯಾಮ್ ದಾಸ್ ಬಿರ್ಲಾರವರಿಂದ ೫ ಲಕ್ಷ ರೂಪಾಯಿಯನ್ನು ವಿಶ್ವವಿದ್ಯಾಲಯಕ್ಕಾಗಿ ಪಡೆದಿರುವರು. ಸೇಟ್ ಜಮ್ನಾಲಾಲ್ ಬಜಾಜ್‌ರವರು ೩೦,೦೦೦ ರೂಪಾಯಿಗಳನ್ನು ಕೊಟ್ಟರು. ಬಿಕಾನೀರ್ ಮಹಾರಾಜರೊಡನೆ ಆಲೋಚಿಸುತ್ತಿರುತ್ತಾರೆ. ಪ್ರಾಯಶಃ ದೇಶೀಯ ಸಂಸ್ಥಾನಗಳಿಂದ ತುಂಬಾ ಸಹಾಯ ಪಡೆಯಬೇಕೆಂದು ಈ ರೀತಿ ಮಾಡಿರುತ್ತಾರೆ.

—ಕಲ್ಕತ್ತಾದಲ್ಲಿ ೧೩ ವರ್ಷದ ಒಂದು ಹುಡುಗಿಯನ್ನು ಅವಳ ತಾಯಿಯು ಕ್ಷಯರೋಗಪೀಡಿತನಾದ ೪೦ ವರ್ಷದವನೊಬ್ಬನಿಗೆ, ಅವನಿಂದ ಹಣತೆಗೆದುಕೊಂಡು ಮದುವೆಮಾಡದಳು. ವಿವಾಹವಾದ ಒಂದು ತಿಂಗಳಲ್ಲಿಯೇ ಮದವಣಿಗನು ಇಹಲೋಕವನ್ನು ಬಿಟ್ಟನು. ತಾಯಿಯು ಪುನಃ ಹುಡುಗಿಯನ್ನು, ೪೫ ವರ್ಷ ವಯಸ್ಸಿನ ಪುರುಷನೊಬ್ಬನಿಗೆ, ಅವನಿಂದಲೂ ಹಣ ತೆಗೆದುಕೊಂಡು. ಮದುವೆಮಾಡುವ ಏರ್ಪಾಡಿನಲ್ಲಿರಲು, ಹುಡುಗಿಯು ವ್ಯಸನಾಕ್ರಾಂತಳಾಗಿ, ಪುನರ್ವಿವಾಹಕ್ಕೆ ತನಗೆ ಇಚ್ಛೆಯಿಲ್ಲವೆಂದು ತಾಯಿಗೆ ತಿಳಿಸಿದಳು. ತಾಯಿಯು ಇವಳ ಪ್ರಲಾಪಕ್ಕೆ ಕಿವಿಕೊಡದಿರಲು, ಹುಡುಗಿಯು ಆತ್ಮಹತ್ಯಮಾಡಿಕೊಂಡಳು.

—ಮದ್ರಾಸಿನ ನ್ಯಾಯವಿಧಾಯಕಸಭೆಯ ಮೆಂಬರು ಮತ್ತು ಸ್ವರಾಜ್ಯಪಾರ್ಟಿಯ ಕಾರ್ಯಾಧ್ಯಕ್ಷರೂ ಆದ ಮಿ| ಸತ್ಯಮೂರ್ತಿಯವರು ಇಂಗ್ಲೆಂಡ್ ದೇಶವನ್ನು ಸುರಕ್ಷಿತವಾಗಿ ತಲಪಿರುವರು.

—ಮೊರ್ಯಾಕೊ ರಾಜ್ಯದಲ್ಲಿ ರಿಫ್ ಜನರಿಗೂ ಫ್ರೆಂಚರಿಗೂ ಬಲವಾದ ಯುದ್ಧ ನಡೆಯುತ್ತಿದೆ.

—ಫ್ರೆಂಚ್ ಮಂತ್ರಿಮಂಡಲಿಯು ಸದ್ಯದಲ್ಲಿಯೇ ರಾಜೀನಾಮೆಕೊಡಬೇಕಾದ ಸಂಭವವು ಒದಗಬಹುದೆಂದು ಎಣಿಸಲಾಗಿದೆ.

—ಇಟಲಿಯ ಮಂತ್ರಿವರ್ಯರು ತಮ್ಮ ಪಾರ್ಟಿಗೆ ಸೇರದ ಅಧಿಕಾರಿಗಳನ್ನು ಕೆಲಸದಿಂದ ತೆಗೆದುಹಾಕುತಿರುವದಾಗಿ ಪ್ರಕಟಿತವಾಗಿದೆ.

—ಆಫ್‌ಘಾನ್‌ರಾಜ್ಯಕ್ಕೆ ಸೇರಿದ ಯುದ್ಧಸಾಮಗ್ರಿಗಳನ್ನೂ, ಅಲ್ಲಿಯ ಬ್ಯಾಂಕಿನಿಂದ ಹಣವನ್ನೂ ಇಟಲಿಯವರು ಬಲಾತ್ಕಾರವಾಗಿ ಹಿಡಿದಿರುವರು.

—ಅಲಿಪೂರ್ ಬಾಂಬ್ ಕೇಸಿನಲ್ಲಿ ಅಪರಾಧಿಯೆಂದು ದಸ್ತಗಿರಿಮಾಡಲ್ಪಟ್ಟಿದ್ದು, ಸ್ವರ್ಗಸ್ಥರಾದ ದೇಶಬಂಧು ದಾಸರಿಂದ ಬಿಡುಗಡೆಹೊಂದಿದ, ಅರವಿಂದ ಘೋಷರನ್ನು ಪುನಃ ಬಂಗಾಳಾಕ್ಕೆ ಬಂದು ದೇಶಬಂಧುವ ಮಾಡಬೇಕೆಂದಿದ್ದ ಕಾರ್ಯವನ್ನು ಮುಂದರಿಸಿರೆಂದು ಮಹಾತ್ಮಾ ಗಾಂಧಿಯವರು ಬಿನ್ನವಿಸಿದುದಕ್ಕೆ ಅವರ ಒಪ್ಪಲಿಲ್ಲ. ಆದರೂ ಇನ್ನೊಂದು ಸಾರಿ ತಾವೆ ಪಾಂಡಿಚರಿಗೆ ಹೋಗಿ ಕೇಳಬೇಕೆಂದಿದ್ದಾರೆ.

—ಸ್ವರ್ಗಸ್ಥರಾದ ದೇಶಬಂಧು ದಾಸರು ನಡೆಸುತ್ತಿದ್ದ ಫಾರ್ವರ್ಡ್ ಎಂಬ ಇಂಗ್ಲೀಷ್ ದೈನಂದಿನ ಪತ್ರಿಕೆಯ ಅವರ ಪತ್ನಿ ವಸಂತಾದೇವಿಯವರು ಸುಪಾದಯಿತಿಯರಾಗುವರೆಂದ ವರ್ತಮಾನ.

—ಗತಿಸಿದ ದೇಶಬಂಧು ದಾಸರವರ ಜ್ಞಾಪಕಾರ್ಥವಾಗಿ ಒಂದು ಆಸ್ಪತ್ರೆಯನ್ನು ಕಟ್ಟಿಸಬೇಕೆಂದು ಹತ್ತು ಲಕ್ಷ ರೂಪಾಯಿಗಳು ಅದಕ್ಕೆ ಆವಶ್ಯಕವೆಂದು ತಿಳಿಸಿ, ಹಣವನ್ನು ಜನರಿಂದ ಕೂಡಿಸಲು ಮಹಾತ್ಮಾ ಗಾಂಧಿಯವರೂ ಇನ್ನೂ ಅನೇಕ ಮುಖಂ ಪ್ರಾರಂಭಿಸುತ್ತಿದ್ದಾರೆ. ಈಗಾಗಲೇ ಸುಮಾ ಲಕ್ಷ ರೂಪಾಯಿನಷ್ಟು ವಸೂಲಾಗಿರುವಂತೆ

—ಜೋಧಪುರದ ಸಂಸ್ಥಾನದವರು ತ ಬೊಂಬಾಯಿ ಕ್ರಾನಿಕಲ್ ಪತ್ರಿ ನಿಷೇಧಿಸಿರುವರೆಂದು ತಿಳಿಯ

—ಚೀನಾಕಲ್ಲೋಲವು — ಚೀನಾದೇಶದ ವ್ಯವಹಾರವು ಬರಬರುತ್ತ ಸಂಕಲಿತವಾಗುತ್ತಿದೆ. ಮೊದಲು ವಿದ್ಯಾರ್ಥಿಗಳ ಗುಂಪೆನಿಸಿಕೊಂಡಿದ್ದು ಈಗ ದೇಶದಲ್ಲೆಲ್ಲಾ ವ್ಯಾಪಿಸಿರುವದು. ಎಲ್ಲಾ ಪಂಗಡದವರೂ ಈ ಗುಂಪಿಗೆ ಸೇರಿರುವರು. ವಿದೇಶೀಯರ ಮೇಲೆ ತೀವ್ರವಾಗಿ ದ್ವೇಶಜ್ವಾಲೆಗಳು ಪ್ರಜ್ವಲಿಸುತ್ತಿರುವದು. ಅದರಲ್ಲಿ ಮುಖ್ಯವಾಗಿ ಇಂಗ್ಲೀಷರಮೇಲೆ ಚೀನಾದವರಿಗೆ ಕೋಪವು ಹೆಚ್ಚುಹೆಚ್ಚುತ್ತಿದೆ. ಪ್ರಜಾಸಮೂಹದ ಆಗ್ರಹವನ್ನು ತಪ್ಪಿಸಿಕೊಳ್ಳಲು ಆಂಗ್ಲಾರಾಯಭಾರಿಯು ಉಪಾಯದಿಂದ ಒಂದು ಗುಡಿಯ ಸೇರಿಕೊಳ್ಳಬೇಕಾಯಿತಂತೆ.

ಪ್ರಜಾನಾಯಕರನ್ನೂ, ಸಂಘಗಳನ್ನೂ ಸಹ ತಕ್ಷಣವೇ ಇಂಗ್ಲೀಷ್‌ನವರಲ್ಲಿ ಸಂಬಂಧವನ್ನು ಬಿಟ್ಟುಬಿಡಿರೆಂದೂ ತಕ್ಷಣವೇ ರಣಭೇರಿಯನ್ನು ಹೊಡೆಯಬೇಕೆಂಬುದಾಗಿಯೂ ಚೀನಾಯುದ್ಧ ಮಂತ್ರಿಯನ್ನು ಬೇಡುತ್ತಿರುವರು. ಅವಶ್ಯಕವಿದ್ದರೆ ಪ್ರಜೆಗಳ ಅಭಿಪ್ರಾಯಕ್ಕೆ ವಿರುದ್ಧವಾಗಿ ಚೀನಾ ಸರ್ಕಾರವು ನಡೆಯುವುದಿಲ್ಲವೆಂದು ಮಂತ್ರಿಯು ಸೂಚಿಸಿರುತ್ತಾರೆ. ಯುದ್ಧವೇ ವ್ಯಾಪ್ತವಾದಲ್ಲಿ ಎಲ್ಲರಿಗಿಂತಲೂ ಮುಂದಾಗಿ ತಾನೆ ಆಂಗ್ಲೇಯರಮೇಲೆ ಕತ್ತಿಯೆತ್ತಿ ರಣರಂಗಕ್ಕೆ ಹೋಗುವೆನೆಂದು ಚೀನಾ ಸೈನ್ಯಾಧ್ಯಕ್ಷನು ತಿಳಿಸಿರುವನು. ಈತನಿಗೆ ಆದೇಶದಲ್ಲಿ ಅಪಾರವಾದ ಗೌರವವಿದೆ. ಆದುದರಿಂದ ಸಂಗತಿಸಂದರ್ಭಗಳನ್ನು ವಿಚಾರಿಸುವಲ್ಲಿ ತ್ವರಿತದಲ್ಲಿಯೇ ಪ್ರಪಂಚವು ಪುನಃ ಯುದ್ಧಾಗ್ನಿಯಲ್ಲಿ ಬೀಳುವುದೇನೋ ಎಂದು ಸಂಶಯವುಂಟಾಗಿದೆ!

—ಬ್ಲೂ ನೈಲ್ ನದಿಯಮೇಲೆ ಸೆನ್ನಾರಿನಿಂದ ಕೆಲ ಮೈಲಿಗಳ ದೂರದಲ್ಲಿರುವ ಮ್ಯಾಕ್‌ವಾರಿನ ದೊಡ್ಡ ಕಟ್ಟೆಯು ಕಟ್ಟಿ ಮುಗಿದಿದೆ. ಅದನ್ನು ಕಟ್ಟಲು ೧ ಕೋಟಿ ಪೌಂಡುಗಳು ಖರ್ಚಾಗಿರುತ್ತದೆ.

—ಷಾಂಗೈನಲ್ಲಿ ನಡೆಯುತ್ತಿರುವ ಅತ್ಯಾಚಾರದ ವಿಷಯವಾಗಿ ಲಕ್ಷಾಂತರ ಚೀನಾ ವಿದ್ಯಾರ್ಥಿಗಳು ದೇಶಿ ಬಹಿಷ್ಕೃತ ಸಭೆಯಲ್ಲಿ ತಾವೂ ಶ್ರಮವಹಿಸಿ ಕೆಲಸ ಮಾಡುತ್ತಿರುವರು.

—ಮಹಾತ್ಮ ಗಾಂಧಿಯವರನ್ನು ಒಬ್ಬ ಹೊಗೆ ಸೊಪ್ಪು ವ್ಯಾಪಾರಸ್ಥನು ತಾನು ತಯಾರಿಸುವ ಸಿಗರೇಟಿನಮೇಲೆ ಅವರ ಹೆಸರನ್ನು ಟ್ರೇಡ್‌ಮಾರ್ಕಾಗಿ ಇಡಬೇಕೆಂದು ಮಹಾತ್ಮರನ್ನು ಅಪ್ಪಣೆ ಕೇಳಿದನು. ಆದರೆ ದೊರೆಯಲಿಲ್ಲ.

ಬಾವ್ಲಾ ಖೂನಿ ಮೊಕದ್ದಮೆಯಲ್ಲಿ ಮರಣದಂಡನೆ ವಿಧಿಸಲ್ಪಟ್ಟವರು ತನ್ನ ಮೇಲೆ ಕರುಣೆಯನ್ನು ತೋರಿಸಬೇಕೆಂದು ವೈಸರಾಯಿಯವರನ್ನು ಪ್ರಾರ್ಥಿಸಿಕೊಳ್ಳುವವರಾಗಿರುತ್ತಾರೆ

—ಬೊಂಬಾಯಿನ ಪ್ರಸಿದ್ಧ ಪಾರ್ಸೀ ಧನಸಂತರಾದ [illegible] ಬೋಮಾಜೀಯವರು ಪ್ಯಾರಿಸ್ ಪಟ್ಟಣದಲ್ಲಿ [illegible] ಸ್ಪೈಂಚ್ ಸ್ತ್ರೀಯನ್ನು ಮದುವೆಯಾದರು. ಅವ ಈಗ ೬೦ ವರ್ಷ. ವಿವಾಹಕಾಲದಲ್ಲಿ ಅವರು [illegible] ಕೈಯಿಂದಲೇ ತಯಾರಿಸಿದ ಖಾದಿಬಟ್ಟೆಯನ್ನು [illegible]ರು.

[illegible]ಚಂದ್ರಮಿತ್ರನೆಂಬೊಬ್ಬ ಬಂಗಾಳೀ ಯುವ [illegible]ನ್ನು ತಯಾರುಮಾಡುವ ಕ್ರಮವನ್ನು [illegible]ಗಳನ್ನು ತನ್ನಲ್ಲಿಟ್ಟುಕೊಂಡಿದ್ದು [illegible]

—ಮೇರಿ ರೊಮೇನಿಯ ಎಂಬ ಸುಂದರಿಯೊಬ್ಬಳು ತನ್ನ ಇಬ್ಬರು ಗಂಡಂದಿರನ್ನೂ ತನ್ನನ್ನು ಪ್ರೀತಿಸುತ್ತಿದ್ದ ೩೨ ಜನ ಕಾಮುಕರನ್ನೂ ಕೇವಲ ಹೊಟ್ಟೆಕಿಚ್ಚಿನಿಂದ ಆರ್ಸೆನಿಕ್ ವಿಷಪ್ರಯೋಗದಿಂದ ಕೊಂದು ಒಬ್ಬೊಬ್ಬರನ್ನು ಒಂದೊಂದು ಪೆಟ್ಟಿಗೆಯಲ್ಲಿ ತುಂಬಿ ಅವರ ಹೆಸರು ವಯಸ್ಸು ಮುಂತಾದುದನ್ನು ಬರೆದು ಆಯಾ ಪೆಟ್ಟಿಗೆಯಮೇಲೆ ಅಂಟಿಸಿ ವರ್ಷಕ್ಕೊಂದು ಸಲ ಅದನ್ನೆಲ್ಲಾ ನೋಡಿ ಮರುಗಿ ಹಾಗೂ ತನ್ನ ಚಾತುರ್ಯ ಮತ್ತು ಧೈರ್ಯವನ್ನು ನೆನೆದುಕೊಂಡು ಹಿಗ್ಗುತಿದ್ದಳು. ತನ್ನ ಮಗನನ್ನು ಕೊಲ್ಲಲು ಕಾರಣವೇನೆಂದು ಕೇಳಲು ಆತನು ತನ್ನ ಕಾರ್ಯವನ್ನು ಬಹಿರಂಗಪಡಿಸುತ್ತೇನೆಂದು ಹೇಳಿದ ತಪ್ಪಿಗಾಗಿ ಆತನನ್ನು ಕೊಂದೆನು. ಈ ಮೊಕದ್ದಮೆಯು ವಿಚಾರಣೆಯಲ್ಲಿದೆ.

—ಸತೀಶಚಂದ್ರ ಬೋಸ್ ಎಂಬ ಸೊಲಿಸಿಟರ್ ರವರು ತಮ್ಮ ಕಕ್ಷಿಗಾರನಾದ ಸಿದ್ದೇಶ್ವರ ಗೊರಾಲ್ ಎಂಬುವನಿಂದ ೨ ಲಕ್ಷ ರೂಪಾಯಿನಷ್ಟು ಹೊಡದ ದ್ದಕ್ಕಾಗಿ ಖೈದು ಮಾಡಲ್ಪಟ್ಟಿರುವರು.

—ಪಾರ್ಲಿಮೆಂಟಿನಲ್ಲಿ ಕಮ್ಯಾಂಡರ್ ಕೆನಿವರ್ತೀ ಎಂಬುವನು ಜಾವ್ಲಾ ಖೂನಿ ಸಂಬಂಧದಲ್ಲಿ ಎಲ್ಲಾ ಅಪರಾಧಿಗಳೂ ವಿಚಾರಣೆಗೆ ಒಳಪಟ್ಟಿರುವರೇ ಎಂದು ಪ್ರಶ್ನೆಮಾಡಲು ಅಲ್ಡ್ ವಿಂಟರ್ಟರವರು ಇನ್ನೂ ಏನಾದರೂ ವಿಚಾರಣೆ ಅವಶ್ಯಕವೆಂದು ಕಂಡುಬಂದಲ್ಲಿ ಮುಂದೆ ಮಾಡಲಾಗುವುದು ಎಂದು ಉತ್ತರ ಕೊಟ್ಟರು.

—ಬ್ರಿಟಿಷ್‌ದೇಶದ ಮುದುವೆ ಲೆಕ್ಕಗಳು:—ನವನಾಗರಿಕ ದೇಶಗಳಲ್ಲಿ ಅಗ್ರಗಣ್ಯವೆಂದು ಹೇಳಲ್ಪಡುತ್ತಿರುವ ಬ್ರಿಟಿಷ್‌ದೇಶದಲ್ಲೂ ಸಹ ಅತಿವೃದ್ಧ ವಿವಾಹಗಳು ನಡೆಯುತ್ತಲೇ ಇರುವುವು ಅಲ್ಲಿ ಅತಿಬಾಲ್ಯ ವಿವಾಹಗಳಿಲ್ಲವು. ಸಾಧಾರಣವಾಗಿ ೧೫ ವರ್ಷವಯಸ್ಸಾದನಿಃ ಸ್ತ್ರೀಪುರುಷರಿಬ್ಬರಿಗೂ ಮದುವೆಮಾಡುವುದಿಲ್ಲ ಈ ನಿಯಮದ ಪ್ರಕಾರ ಅತಿಬಾಲ್ಯ ವಿವಾಹಗಳದೃಶ್ಯವಾದುವು. ಈ ವಿಷಯದಲ್ಲಿ ಇಂಡಿಯಾ ದೇಶಕ್ಕಿಂತಲೂ ಬ್ರಿಟಿಷ್‌ದೇಶವು ಮೇಲಾಗಿರುವುದು. ಆದರೆ ಅತಿವೃದ್ಧ ವಿವಾಹಗಳ ವಿಷಯದಲ್ಲಿ ಬ್ರಿಟಿಷ್ ದೇಶವು ಭಾರತದೇಶಕ್ಕಿಂತಲೂ ಅಧಮ ಸ್ಥಿತಿಯಲ್ಲಿರುವುದು. ಅಲ್ಲಿ ಯುವಾವುರುಷರು ೯೦ ವರ್ಷಗಳ ವೃದ್ಧ ಸ್ತ್ರೀಯರನ್ನು ಮದುವೆಮಾಡಿಕೊಂಡಿರುವರು. ಲೆಕ್ಕಪ್ರಕಾರವಾಗಿ ಅನೇಕಮಂದಿ ೪೦ ವರ್ಷ ವಯಸ್ಸಾಗದೆ ಮದುವೆಮಾಡಿಕೊಳ್ಳರು. ೪೦ ವರ್ಷದವರನ್ನು ಪ್ರೌಢರೆಂದು ಭಾವಿಸುವರು. ದಾಮಾಷಾ ವರ್ಷಕ್ಕೆ ೪೦ ವರ್ಷ ವಯಸ್ಸಿನವರಲ್ಲಿ ೨೦೪೩೫ ಪುರುಷರಿಗೂ ೨೧೧೬೯ ಸ್ತ್ರೀಯರಿಗೂ ವಿವಾಹಗಳು ನಡೆಯುತ್ತಿರುವವು. ೨೦ ವರ್ಷ ವಯಸ್ಸಿನ ಪುರುಷನು ೯೦ ವರ್ಷ ವಯಸ್ಸಿನ ಸ್ತ್ರೀಯನ್ನು ಮದುವೆಯಾದನು. ೨೯ ವರ್ಷ ವಯಸ್ಸಿನ ಪುರುಷನು ೯೫ ವರ್ಷ ವಯಸ್ಸಿನ ಹೆಂಗಸನ್ನು ಮದುವೆಯಾದನು. ೧೫ ವರ್ಷದ ಯುವತಿಯನ್ನು ೭೮ ವರ್ಷ ವಯಸ್ಸಿನ ಪುರುಷನು ಮದುವೆಯಾದನು. ೧೮ ವರ್ಷ ವಯಸ್ಸಿನ ಯುವತಿಯನ್ನು ೮೧ ವರ್ಷ ವಯಸ್ಸಿನ ಪುರುಷನು ಮದುವೆಯಾದನು. ೨೨ ವರ್ಷ ವಯಸ್ಸಿನ ಹೆಂಗಸನ್ನು ೮೮ ವರ್ಷದ ವೃದ್ಧನು ವಿವಾಹ

—ಕಲ್ಕತ್ತಾದಲ್ಲಿ ಒಂದು ಹತ್ತೀ ಕಾರ್ಖಾನೆಗೆ ಬೆಂಕಿ ಬಿದ್ದು ವಿಶೇಷ ನಷ್ಟವಾಗಿದೆ. ಒಬ್ಬ ಹೆಂಗಸು ಬೆಂಕಿಯಪಾಲಾದಳೆಂದೂ ತಿಳಿಯಬಂದಿದೆ.

—ನಮ್ಮ ಸಂಸ್ಥಾನದ ದಿವಾನರಾದ ಸರ್ ಎ. ಆರ್. ಬ್ಯಾನರ್ಜಿಯವರು ೮೦೦೦ ರೂಪಾಯಿಗಳಮೇಲೆ ಗ್ವಾಲಿಯರಿನ ರೀಜೆಂಟರಾಗಿ ಹೋಗುವರೆಂದು ಬೆಂಗಳೂರಿನ ಬಾತ್ಮೀದಾರರೊಬ್ಬರು ಮದ್ರಾಸಿನ ಒಂದು ಪತ್ರಿಕೆಗೆ ಬರೆದಿದ್ದಾರೆ.

—ಮದ್ರಾಸಿನಲ್ಲಿ ಪುರುಷರಿಗೂ, ಸ್ತ್ರೀಯರಿಗೂ ಮತ್ತು ಮಕ್ಕಳಿಗೂ ಪ್ರತ್ಯೇಕಪ್ರತ್ಯೇಕ ಕ್ಷಯರೋಗ ನಿವಾರಣ ಔಷಧಾಲಯಗಳನ್ನು ಸ್ಥಾಪಿಸುವುದರಲ್ಲಿದೆ.

—ವೈಕೊಂನಲ್ಲಿ ಅಸ್ಪೃಶ್ಯರಿಗೆ ನಿಷೇಧಿಸಲ್ಪಟ್ಟಿದ್ದ ದೇವಾಲಯದ ವಿಂಭಾಗದ ರಸ್ತೆಗಳಲ್ಲಿ ಮೂರನ್ನು ಮಾತ್ರ ಬಿಟ್ಟುಕೊಟ್ಟಿರುವರು. ಯಾವ ಅಡಚಣೆಯೂ ಇಲ್ಲದೆ ಅಲ್ಲಿ ಅಸ್ಪೃಶ್ಯರ ಓಡಾಡ ಪ್ರಾರಂಭ!

—ಚಾನ್ ಲ್ಯಾಂಗ್ಡನ್ ಎಂಬೊಬ್ಬ ಅಮೇರಿಕಾದವನು ಕಾಶ್ಮೀರದಲ್ಲಿ ನದಿಯಲ್ಲಿ ಮುಳಗಿ ಸತ್ತುಹೋದನು. ೧೯ ದಿವಸಗಳ ಮೇಲೆ ಅವನ ಶವವು ತೇಲಿಬಂದು ಸಿಕ್ಕಿರುತ್ತದೆ.

—ಮದ್ರಾಸಿನ ಸುಪ್ರಸಿದ್ಧ ಇಂಗ್ಲೀಷ್ ದೈನಿಕಪತ್ರಿಕೆಯ ಸಂಪಾದಕರಾದ ಶ್ರೀಯುತ ಪ್ರಕಾಶಂ ರವರು ಸ್ವರಾಜ್ಯಾಪಾರ್ಟಿಗೆ ಸೇರಿದರು.

—ಮುಂದೆ ಬರುವ ಬಕ್ರೀದ್ ಹಬ್ಬದಲ್ಲಿ ಮುಸಲ್ಮಾನರು ಹಿಂದುಗಳ ಮನಸ್ಸು ಕೆಡುವ ಕೆಲಸಗಳನ್ನು ಮಾಡಕೂಡದೆಂದು ಡೆಲ್ಲಿಯ ಹಿಂದೂ ಮಹಾಸಭೆಯವರು ಮಾಡಿರುವ ಠರಾವನ್ನು ಮುಸಲ್ಮಾನರು ಒಪ್ಪಿರುವರು.

—ಕೊಚಿನ್ ಸರ್ಕಾರದವರು ಲೆಜಿಸ್ಲೆಟಿವ್ ಕೌನ್ಸಿಲಿನಲ್ಲಿ ಒಂದು ಹೊಸ ಬಿಲ್ಲನ್ನು ತರಲು ಅಪ್ಪಣೆ ಕೊಟ್ಟಿರುವರು. ದಿವಾನ್ ಪೇಷ್ಕಾರರಿಂದ ಸರ್ಟಿಫಿಕೇಟನ್ನು ಪಡೆದು ಗಂಡನಿಲ್ಲದೆ ತುಂಬಾ ಮಕ್ಕಳೊಂದಿಗರಾದ ಹೆಂಗಸರಿಗೆ ಮುನಿಸಿಪಾಲಿಟಿ ಮತ್ತು ಪಂಚಾಯಿತಿ ಮೂಲಕ ಸಹಾಯ ದೊರೆಕಿಸಿಕೊಡಬೇಕೆಂಬುದೇ ಈ ಬಿಲ್ಲಿನ ಮುಖ್ಯೋದ್ದೇಶ.

—ಪ್ರಪಂಚದಲ್ಲೆಲ್ಲಾ ಆಗುವ ಅರಳೆಬೆಳೆಯ ಮೂರು ಪಾಲಿನಲ್ಲಿ ಎರಡು ಪಾಲಿನಷ್ಟು ಅಮೆರಿಕಾದೇಶವೊಂದರಲ್ಲಿಯೇ ಬೆಳೆಯುವುದು.

—ಈಗ ಜಲಾವಣೆಯಲ್ಲಿರುವ ಎರಡಾಣೆ ಬೆಳ್ಳಿನಾಣ್ಯವನ್ನು ಜಲಾವಣೆಯಿಂದ ತೆಗೆದುಹಾಕಬೇಕೆಂದು ಸರ್ಕಾರದವರು ಹುಕುಂ ಮಾಡಿರುವರು.

—ಪ್ರೊಫೆಸರ್ ದೇವಲ್ ಸರ್ಕಸ್ಸಿನವರಿಗೆ ಶ್ರೀಮನ್ಮಹಾರಾಜರವರು ೧೦೦೦ ರೂಪಾಯಿಗಳನ್ನು ಬಹುಮಾನವಾಗಿ ದಯಪಾಲಿಸಿರುವರು.

—ಐರ್ಲೆಂಡಿನ ಅಧ್ಯಕ್ಷರಾಗಿದ್ದ ಡಿ ವೆಲರ ರವರು ತಮ್ಮ ಹಿಂದಿನ ಸ್ಕೂಲ್ ಮಾಸ್ಟರ್ ಕೆಲಸಕ್ಕೆ ಪುನಃ ಹೊರಟುಹೋಗುತ್ತಾರೆ.

—ಮುಂದಿನ ತಿಂಗಳಿಂದ ರಾಜಧಾನಿಯಲ್ಲಿ "ಅವ ಕಾಪತೋಷಿಣೀ" ಎಂಬ ಮಾಸಪತ್ರಿಕೆಯು ಪ್ರಕಟಿಸಲ್ಪಡುವುದೆಂದು ತಿಳಿಯಪಡಿಸಿ ಮಾದರಿ ಸಂಚಿಕೆಯೊಂದನ್ನು ನಮ್ಮಲ್ಲಿಗೆ ಆ ಪತ್ರಿಕೆಯ ಸಂಪಾದಕರು ಕಳುಹಿಸಿಕೊಟ್ಟಿರುತ್ತಾರೆ. ಇದರ ವಾರ್ಷಿಕ ಚಂದಾ

This space is not available to the public as it has been reserved for Government Advertisements

The Champion Metropolitan College of Commerce, Economics, Banking, etc.
YELWAL ROAD, MYSORE.
1925--26 Prospectus can be had free at the College or by post on receipt of ½ anna stamp to cover postage (5-6)

TO LET

to

Permanent Advertisers

To Popularise your Business
in the Karnataka Provinces
YOU MUST ADVERTISE IN
the "SATYAVADI"
BECAUSE

It is the cheapest and most up-to-date Karnatic Weekly.
It is read largely and widely
Itis circulated among all grades of persons
It offers a profitable medium for advertising

Advertisement in this Paper is a good investment

Registered for Government Advertisements

Your Advertisement is Solicited

RATES of ADVERTISEMENTS

	1 clm	½ clm	¼ clm	1 inch
1 year	Rs 100	55	30	12
6 months	55	30	17	7
3 months	30	17	9	4
1 month	11	6	4	1-8-0
1 insertion	3	2	1-4-0	0-8-0

Advertisement charges are strictly payable in advance. One column measures about 13"×2½". 3columns to a page. Voucher copy supplied free.

All communications & remittances to be addressed to
The Manager,
SATYAVADI Office,
Mysore, S. India.

ಇಂಡಿಯಾ ಪ್ರಾವಿಡೆಂಟ್ ಕಂಪೆನಿ, ಲಿಮಿಟೆಡ್ 8-5

ಸುಪ್ರಸಿದ್ಧವಾದ ಈ ಕಂಪೆನಿಯು ಕಲ್ಕತ್ತಾದಲ್ಲಿ 1910 ರಲ್ಲಿ ಸ್ಥಾಪಿತವಾದುದು. ಕಂಪೆನಿಯ ಭದ್ರತೆಗೆ ಸರ್ಕಾರದಲ್ಲಿ ಹಣ ಡಿಪಾಜಿಟ್ ಮಾಡಿರುತ್ತೆ. ತಿಂಗಳಿಗೆ 1 ರೂಪಾಯಿಯ 8 ಆಣೆ ಪ್ರಕಾರ ರೂ 500, ರೂ 250 ಗಳಿಗೆ, ಪುರುಷರಿಗೂ ಸ್ತ್ರೀಯರಿಗೂ, ವೈದ್ಯಪರೀಕ್ಷೆ ಇಲ್ಲದೆ, ವಯಸ್ಸಿನ ಪ್ರತಿಬಂಧಕವಿಲ್ಲದೆ, ಜೀವವಿಮೆ ಮಾಡಲಾಗುತ್ತೆ. ಹೆಚ್ಚು ವಿಷಯಕ್ಕೂ, ಏಜೆಂಸಿಯ ಷರತ್ತಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮೈಸೂರು ಮತ್ತು ಕೊಡಗಿನ ಚೀಫ್ ಏಜೆಂಟ
927 ಚಾಮರಾಜ ಪುರಂ, ಮೈಸೂರು.

ಕಾದಂಬರೀ ಸಂಗ್ರಹ

ಮನೋಹರವಾದ ಕರ್ಣಾಟಕ ಮಾಸಪತ್ರಿಕೆ

ಚಾಮರಾಜ ನಗರ

THE
MYSORE PRESS
RAMAVILAS ROAD
MYSORE

We undertake to print
JOBS — BOOKS & PERIODICALS

Neat Workmanship
Moderate Charges
Prompt Execution

Colour & artistic work a speciality

Trial order solicited

B. S. MURTHY, B. A
Proprietor.

ಮೈಸೂರ್ ಪ್ರೆಸ್
ರಮಾವಿಲಾಸ ಅಗ್ರಹಾರ
ಮೈಸೂರು.

ನಮ್ಮಲ್ಲಿ ಎಲ್ಲಾ ವಿಧವಾದ ಚಿಕ್ಕ ಪುಟ್ಟ ಮುದ್ರಣ ಕಾರ್ಯವೂ, ಪುಸ್ತಕಗಳೂ, ಮಾಸಪತ್ರಿಕೆಗಳೂ ಸಕಾಲಕ್ಕೆ ಸುಲಭ ದರದಿಂದ ಮಾಡಲ್ಪಡುತ್ತೆ.

ದಯವಿಟ್ಟು ಗಮನಿಸಿ:—
ನಮ್ಮ ಮುದ್ರಣವು ಬಹು ಅಂದ!
ನಮ್ಮ ಅಕ್ಷರವು ಬಲು ಚಂದ!!
ನಮ್ಮ ಕೆಲಸ ನೋಡುವವರಿಗೆ
ನೇತ್ರಾನಂದ!!!

ಬಿ. ಎಸ್. ಮೂರ್ತಿ, ಬಿ.
ಪ್ರೊಪ್ರೈಟರ್.

Printed and Published by B.
at the Mysore Press, My
and Proprietor.